**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 28.05.2021.**

**1] ಮನಗೂಳಿ ಪೊಲೀಸ ಠಾಣೆ ಗುನ್ನಾ. ನಂ: 68/2021 ಕಲಂ: 279. 337. 304(ಎ) ಐ.ಪಿ.ಸಿ.**

ದಿನಾಂಕ: 27.05.2021 ರಂದು 07.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೃತ: ಲಕ್ಷ್ಮಣ ಹಣಮಂತ ಚವ್ಹಾಣ 21 ವರ್ಷ, ಡ್ರೈವರ. ಸಾ॥ಸೆಂಡಗೆವಾಡಿ ತಾ॥ಪಂಡರಾಪೂರ ಜಿಲ್ಲಾ ಸೋಲಾಪೂರ ರಾಜ್ಯ ಮಹಾರಾಷ್ಟ್ರ ಮಹಿಂದ್ರಾ ಬುಲೇರೊ ವಾಹನ ನಂಬರ ಎಮ್.ಎಚ್.42 ಎಕ್ಯೂ 6647 ನೇದ್ದರ ಚಾಲಕ. ಈತನು ತಾನು ನಡೆಸುತ್ತಿದ್ದ ಮಹಿಂದ್ರಾ ಬುಲೇರೊ ವಾಹನ ನಂಬರ ಎಮ್.ಎಚ್ 42 ಎಕ್ಯೂ 6647 ನೇದ್ದರಲ್ಲಿ ಪಿರ್ಯಾದಿದಾರನಿಗೆ ಕೂಡಿಸಿಕೊಂಡು ನಿಡಗುಂದಿ-ವಿಜಯಪುರ ಎನ್.ಎಚ್ 50 ರಸ್ತೆಯ ಮನಗೂಳಿಯಿಂದ ಕೂಡಗಿ ಕಡೆಗೆ ಸುಮಾರು 4-5 ಅಂತರ ಮೇಲೆ ನಿಡಗುಂದಿ ಕಡೆಯಿಂದ ಮನಗೂಳಿ ಕಡೆಗೆ ಅತೀ ವೇಗವಾಗಿ ಅಜಾಗರೂಕತೆಯಿಂದ ಮಾನವೀಯ ಜೀವಕ್ಕೆ  ಅಪಾಯವಾಗುವ ರೀತಿಯಲ್ಲಿ ನಡೆಸುತ್ತಾ ಹೊರಟವನೆ ಹೋಗಿ ತಮ್ಮ ಮುಂದೆ ವಿಜಯಪುರ ಕಡೆಗೆ ಹೊರಟ ಲಾರಿ ನಂಬರ: ಎಮ್.ಎಚ್ 09-ಸಿಯು 9965 ನೇದ್ದರ ಹಿಂಬದಿಯ ಪಾಟಾಕ್ಕೆ ಹಾಯಿಸಿ ಅಪಘಾತ ಮಾಡಿ ಪಿರ್ಯಾದಿಯ ಎಡಮಲಿಕಿನ ಹತ್ತಿರ ಸಾದಾ ಸ್ವರೂಪದ ಗಾಯ ಪೆಟ್ಟು ಪಡಿಸಿ ತಾನು ಸಹ ಮೈಗೆ ಹೊಟ್ಟೆಗೆ ಭಾರಿ ಗಾಯ ಪೆಟ್ಟು ಹೊಂದಿ ವಿಜಯಪುರ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಉಪಚಾರ ಹೊಂದುವಾಗ ಉಪಚಾರ ಫಲಿಸದೆ ಮರಣ ಹೊಂದಿರುತ್ತಾನೆ ಅಂತ ವಗೈರೆ ಪಿರ್ಯಾದಾರನ ಪಿರ್ಯಾದದಲ್ಲಿ ನಮೂದು ಅದೆ ಈ ಬಗ್ಗೆ ನಾರಾಯಣ ತಂ ಮಹಾದೇವ ಪವಾರ 26 ವರ್ಷ, ಹಿಂದು-ಮರಾಠ, ಸಾ॥ಕರಕಂಬ ತಾ॥ಪಂಡರಪೂರ ಜಿ॥ಸೋಲಾಪೂರ ರಾಜ್ಯ ಮಹಾರಾಷ್ಟ್ರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.05.2021 ರಂದು ಮನಗೂಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮಹಿಳಾ ಪೊಲಿಸ್ ಠಾಣೆ ಗುನ್ನಾ. ನಂ: 54/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 25.05.2021 ರಂದು 19.00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಮಾದೇವಿ ಗಂ॥ ರಮೇಶ ನಿಡಗುಂದಿ, ವಯಾ: 30 ವರ್ಷ, ಜಾತಿ: ಹಿಂದೂ,  ಉದ್ಯೋಗ : ಮನೆಗೆಲಸ, ಸಾ॥ ಸುಹಾಗ ಕಾಲನಿ, ವಿಜಯಪುರ ಇವಳು ಮನೆಯಲ್ಲಿದ್ದ 60.000 ರೂಪಾಯಿ, 3 ತೊಲೆ ಬಂಗಾರ, ಎಸ್‌ಬಿಐ ಬ್ಯಾಂಕಿನ 3 ಬಾಂಡ್ ಪೇಪರಗಳನ್ನು ತೆಗೆದುಕೊಂಡು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಎಲ್ಲಿಯೋ ಹೋಗಿ ಹೋಗಿ ಕಾಣೆಯಾಗಿರುತಾಳೆ. ಕಾಣೆಯಾಗಿರುವ ಮಾದೇವಿ ಇವಳದು ಗೋದಿಗೆಂಪು ಮೈಬಣ್ಣ, ಮೈಯಿಂದ ಸಾದಾರಣ ಮೈಕಟ್ಟು, ಎತ್ತರ: 5.0 ಪೂಟ್, ಕೊಲು ಮುಖ, ಇದ್ದು, ಕನ್ನಡ, ಭಾಷೆ ಮಾತನಾಡುತ್ತಾಳೆ. ಮನೆಯಿಂದ ಹೋಗುವಾಗ ಮೆಹಂದಿ ಬಣ್ಣದ ನೈಟಿ ಬಟ್ಟೆ ಧರಿಸಿಕೊಂಡು ಹೋಗಿರುತ್ತಾಳೆ. ಈ ಬಗ್ಗೆ ರಮೇಶ ತಂ॥ ವಸಂತ ನಿಡಗುಂದಿ, ವಯಾ : 39 ವರ್ಷ  ಜಾತಿ : ಹಿಂದೂ ಲಿಂಗಾಯತ, ಉಧ್ಯೋಗ : ಡ್ರೈವರ ಸಾ॥ ಸುಹಾಗ ಕಾಲನಿ, ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.05.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಗೋಲಗುಮ್ಮಜ ಪೊಲಿಸ್ ಠಾಣೆ ಗುನ್ನಾ. ನಂ: 57/2021 ಕಲಂ: 188, 269 ಐಪಿಸಿ & 78(3) ಕೆ.ಪಿ. ಆಕ್ಟ್**

ದಿನಾಂಕ: 27.05.2021 ರಂದು 17.10 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಇಸ್ಮಾಯಿಲ್ ಮೊಹ್ಮದಗೌಸ್ ಹವಾಲ್ದಾರ, ಸಾ: ನಿಸಾರಮಡ್ಡಿ, ವಿಜಯಪುರ ಈತನು ವಿಜಯಪುರ ಶಹರದ ಅತ್ತಾವುಲ್ಲಾ ಚೌಕ ಹತ್ತಿರ ರಸ್ತೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಮಾನ್ಯ ಲಾಕ್ ಡೌನ್ ಆದೇಶವನ್ನು ಉಲ್ಲಂಘನೆ ಮಾಡಿ ಕೆಲವು ಜನರು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಓ.ಸಿ ಅಂಬುವ ಮಟಕಾ ಜೂಜಾಟವನ್ನು ಆಡುತ್ತಿದ್ದಾಗ ಕೊರೋನಾ ವೈರಸ್ ಎಂಬ ಮಾರಕ ಕಾಯಿಲೆ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಅಂತಾ ತಿಳಿದು-ತಿಳಿದು ನಿರ್ಲಕ್ಷ್ಯತನ ಪ್ರದರ್ಶಿಸಿ ತನ್ನ ಪಾಯಿದೆಗೋಸ್ಕರ ಸಾರ್ವಜನಿಕ ಸ್ಥಳದಲ್ಲಿ ನಿಂತು ಹಣವನ್ನು ಓ.ಸಿ ನಂಬರ ಬರೆದ ಚೀಟಿ ಒಂದು, ಹಾಗೂ ಒಂದು ಬಾಲ್ ಪೆನ್ ಇವುಗಳ ಸಮೇತ ಸಿಕ್ಕ ಅಪರಾಧ. ಜಪ್ತಾದ ಮಾಲು: ರೋಖ ಹಣ= 1540 ರೂ. ಗಳು ಓಸಿ ಬರೆದ ಚೀಟಿ-1 ಬಾಲ್ ಪೆನ್-1 ಈ ಬಗ್ಗೆ ಸ:ತ: ರಾಜೇಶ್ ಎಸ್. ಲಮಾಣಿ, ಪಿ.ಎಸ್.ಐ (ಕಾ&ಸು) ಗೋಲಗುಮ್ಮಜ್ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 27.05.2021 ರಂದು ಗೋಲಗುಮ್ಮಜ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.